

# ಲಾಕ್‌ಡೌನ್ ವೇಳೆ ಮನೆಮನೆಗೆ ಪುಸ್ತಕ

ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ಹೇರಿದ ಮೊದಲ ಹಂತದ ಲಾಕ್‌ಡೌನ್ ವೇಳೆ ವಿವಿಧ ಸಂಘ ಸಂಸ್ಥೆಗಳು ಜನರಿಗೆ ದವಸಧಾನ್ಯಗಳನ್ನು ಹಂಚಿದ್ದನ್ನು ಕೇಳಿದ್ದೇವೆ. ಆದರೆ ಬೆಂಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ದಾಸರಹಳ್ಳಿ ಘಟಕವು ಜನರಿಗೆ ಅಕ್ಕರೆಯಿಂದ ಹಂಚಿದ್ದು ಕನ್ನಡ ಪುಸ್ತಕಗಳನ್ನು!

ಹೊಟ್ಟೆಯ ಹಸಿವಿನ ಜೊತೆಗೆ ಸಾಹಿತ್ಯಿಕ–ಸಾಂಸ್ಕೃತಿಕ ಹಸಿವನ್ನು ನೀಗುವುದೂ ಮುಖ್ಯ ಎನ್ನುವ ನಂಬಿಕೆಯಿಂದ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಕಸಾಪ ಘಟಕದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮನೆಮನೆಗೆ ತೆರಳಿ ಸಾವಿರಾರು ಕನ್ನಡ ಪುಸ್ತಕಗಳನ್ನು ಉಚಿತವಾಗಿ ವಿತರಿಸಿದ್ದಾರೆ. ಈ ಮೂಲಕ ಲಾಕ್‌ಡೌನ್‌ನ ಸಂಕೀರ್ಣ ಸಂದರ್ಭದಲ್ಲೂ ಸಾಹಿತ್ಯದ ಪರಿಚಾರಿಕೆ ನಡೆಸಿದ್ದಾರೆ. ಹೀಗೆ ಪುಸ್ತಕ ವಿತರಿಸುವಾಗ ಮಾಸ್ಕ್ ಧರಿಸುವ ವಿವೇಕವನ್ನೂ ಪರಿಷತ್ತಿನ ಪದಾಧಿಕಾರಿಗಳು ಮರೆತಿಲ್ಲ.

‘ಅಕ್ಕಿ ಹಂಚಲು ನೂರಾರು ಮಂದಿ ಇದ್ದಾರೆ. ಪುಸ್ತಕ ಹಂಚಲು ಯಾರಿದ್ದಾರೆ ಹೇಳಿ? ಹಾಗಾಗಿ ನಾವು ಈ ಲಾಕ್‌ಡೌನ್ ಅವಧಿಯನ್ನು ಜನರಲ್ಲಿ ಕನ್ನಡಾಭಿಮಾನ ಮೂಡಿಸಲು ಬಳಸಿಕೊಂಡಿದ್ದೇವೆ. ಈ ಮೂರು ತಿಂಗಳ ಅವಧಿಯಲ್ಲಿ ಸುಮಾರು ಹತ್ತೂವರೆ ಸಾವಿರಕ್ಕಿಂತಲೂ ಹೆಚ್ಚು ಕನ್ನಡ ಪುಸ್ತಕಗಳನ್ನು ಉಚಿತವಾಗಿ ವಿತರಿಸಿದ್ದೇವೆ. ಜನ ಮನೆಯಲ್ಲಿಯೇ ಇರುವುದರಿಂದ ಖಂಡಿತವಾಗಿ ನಮ್ಮ ಪುಸ್ತಕಗಳನ್ನು ಓದುತ್ತಾರೆ’ ಎನ್ನುವ ವಿಶ್ವಾಸ ಘಟಕದ ಅಧ್ಯಕ್ಷರೂ ಸ್ವತಃ ಬರಹಗಾರರೂ ಆದ ವೈ.ಬಿ.ಎಚ್. ಜಯದೇವ್ ಅವರದು. ಈ ಪುಸ್ತಕ ಅಭಿಯಾನ ನಾಡಿನಾದ್ಯಂತ ನಡೆದರೆ ಎಷ್ಟು ಚೆನ್ನ ಅಲ್ಲವೇ?

–ಪ್ರಸನ್ನಕುಮಾರ್ ಯಾದವ್, ಟಿ. ದಾಸರಹಳ್ಳಿ, ಬೆಂಗಳೂರು

# ಗುಡ್ಡದ ಗೊರವ

ನಾಡಿನಲ್ಲಿ ಕಾರಣಿಕ ಉತ್ಸವ ಆಚರಿಸುವ ದೇವಾಲಯಗಳು ಹಲವು. ಇಂತಹ ದೇವಾಲಯಗಳಲ್ಲಿ ಹಾವೇರಿ ಜಿಲ್ಲೆಯ ದೇವರಗುಡ್ಡದ ಮೈಲಾರಲಿಂಗ ಪ್ರಮುಖವಾದದ್ದು. ಗೊರವರು ಮೈಲಾರಲಿಂಗನ ಭಕ್ತರು. ಗೊರವರಲ್ಲಿ ಕೆಲವರು ತಮ್ಮನ್ನು ಮೈಲಾರಲಿಂಗನಿಗೆ ಅರ್ಪಿಸಿಕೊಳ್ಳುತ್ತಾರೆ. ಇದನ್ನು ‘ಹೊರೆ ಹೊರುವುದು’ ಅಥವಾ ‘ದೇವರನ್ನು ಹೊರುವುದು’ ಎಂದು ಕರೆಯುವರು. ಸಂತಾನ ವೃದ್ಧಿ, ಕಷ್ಟ ನಿವಾರಣೆಗೆ ಈ ಹರಕೆಯನ್ನು ಮಾಡಿಕೊಳ್ಳುತ್ತಾರೆ. ಗೊರವರು ಕಂಬಳಿ ಕುಲಾವಿ, ಹೆಗಲಲ್ಲಿ ಜೋಳಿಗೆ, ದೋಣಿ, ಭಂಡಾರಡಬ್ಬಿ, ಗಂಟೆ, ತ್ರಿಶೂಲ, ನಾಗಬೆತ್ತ, ಡಮರುಗಗಳನ್ನು ಹೊಂದಿರುತ್ತಾರೆ.

ಕರಡಿ ಗೊರವರು ಕವಡೆಯ ದೊಡ್ಡ ಸರಗಳನ್ನು ಧರಿಸಿದರೆ ಇನ್ನು ಕೆಲವರು ಒಂದೆರಡು ಕವಡೆಗಳನ್ನು ಮಾತ್ರ ಧರಿಸುತ್ತಾರೆ. ಕರಡಿಯ ಕೂದಲು ಸಹಿತವಾದ ಚರ್ಮದ ಟೊಪ್ಪಿಯನ್ನು ಧರಿಸುತ್ತಾರೆ. ಗೊರವರು ನುಡಿಸುವಂತಹ ವಾದ್ಯವನ್ನು 'ಪಾರಿ' ಎಂದು ಕರೆಯುವರು. ತಗಡಿನ ಎರಡು ಮೂರು ಗಂಟೆಗಳನ್ನು ಉದ್ದವಾದ ಕಟ್ಟಿಗೆಯೊಂದಕ್ಕೆ ಸಾಲಾಗಿ ಕಟ್ಟಿ ಅದನ್ನು ಹಗ್ಗದಿಂದ ಬಿಗಿದು ಹೆಗಲ ಮೇಲಿಂದ ಕೆಳಕ್ಕೆ ಇಳಿ ಬಿಟ್ಟಿರುತ್ತಾರೆ. ಇದನ್ನು ಪಾರಿ ಗೊರವರು ಮಾತ್ರ ಧರಿಸುತ್ತಾರೆ.

–ಶ್ರೀನಿವಾಸ ಮೂರ್ತಿ ಎನ್.ಎಸ್.

